ದಿಃ **04.04.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಖ್ಯ ವಿಚಾರಣೆಃ ಶ್ರೀ ಕೆ ಪಿ ಆರ್ ವಕೀಲರಿಂದ ಪ್ರತಿವಾದಿಯ ಪರ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ನನಗೆ ತಿಳಿದಿದ್ದು ಸತ್ಯವಾಗಿರುತ್ತದೆ.

ಆದುದ್ದರಿಂದ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಶ್ರೀಮತಿ ವಿ ಪಿ ವಕೀಲರಿಂದ ವಾದಿಯ ಪರ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರ ನನಗೆ ಗೊತ್ತಿದೆ. ಈಗ ತೋರಿಸಿದ ನಿಪಿ-6 ಮತ್ತು ನಿಪಿ-7 ರಲ್ಲಿ ನನ್ನ ಹಾಗೂ ನನ್ನ ಮಗಳ ಸಹಿ ಇರುತ್ತದೆ. ಬ್ಯಾಂಕಿನವರು ನನ್ನ ಹಾಗೂ ನನ್ನ ಮಗಳ ಸಹಿಯನ್ನು insuranceಗೆ ಬೇಕೆಂದು ಪಡೆದಿದ್ದಾರೆಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮೃತ ನನ್ನ ಗಂಡನ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ. ನನ್ನ ಗಂಡನಿಂದ ಅವರು ಮೃತ ಪಟ್ಟ ನಂತರ ನನಗೂ ಹಾಗೂ ನನ್ನ ಮಗಳಿಗೆ ಅವರಿಗೆ ಸೇರಿದ ಆಸ್ತಿಯು ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಎಲ್ಲಿ ಕೆಲಸ ಮಾಡುತ್ತಿದ್ದರು, ವಾದಿ ಬ್ಯಾಂಕಿನಿಂದ ಎಷ್ಟು ಸಾಲ ತೆಗೆದುಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.